ಬೆಳಗಾವಿ ಜಿಲ್ಲೆಯಲ್ಲಿ ಹೂವು ಹಣ್ಣುಗಳನ್ನು ಬೆಳೆಯಲು ಹಾಗೂ ರಫ್ತು ಮಾಡಲು ವಿಶೇಷ ಕ್ರಮ

1421 (1756) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಹೂವು, ಹಣ್ಣುಗಳನ್ನು ಬೆಳೆಯಲು ಒಳ್ಳೆಯ ಹವಾಗುಣ ಇರುವುದರಿಂದ ಇಲ್ಲಿ ಹೂ-ಹಣ್ಣುಗಳನ್ನು ಬೆಳೆಯಲು ತೋಟಗಾರಿಕೆ ಇಲಾಖೆಯಿಂದ ವಿಶೇಷ ಕ್ರಮವನ್ನು ಹಮ್ಮಿಕೊಳ್ಳಲಾಗುವುದೇ.

ಆ) ಹಾಗಿದ್ದಲ್ಲಿ ಯಾವ ವಿಶೇಷ ಕ್ರಮ ಹಾಕಿಕೊಳ್ಳಲಾಗುವುದು

ಇ) ಖಾಸಗಿಯವರು ಬೆಳೆದ ಹೂವು ಮತ್ತು ಹಣ್ಣುಗಳನ್ನು ಬೇರೆ ರಾಜ್ಯಗಳಿಗೆ ಕಳುಹಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಖಾಸಗಿಯವರು ಬೆಳೆದ ಹಣ್ಣು ಹೂಗಳನ್ನು ರಫ್ತು ಮಾಡಲು ಸರ್ಕಾರದಿಂದ ಯಾವ ಸಹಾಯವನ್ನು ಮಾಡಲಾಗುವುದು ಹಾಗೂ ಎಷ್ಟು ಮೊತ್ತದ ಹೂ ಹಣ್ಣುಗಳನ್ನು ರಫ್ತು ಆಗುತ್ತದೆ?

ಶ್ರೀ ರಾಜಅಮರೇಶ್ವರ ನಾಯಕ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು.

ಆ) ಆ) ಉತ್ತಮ ಗುಣಮಟ್ಟದ ಹೂವಿನ ಬೀಜ: ಗೆಡ್ಡೆ ಸಸ್ಯ ಸಾಮಗ್ರಿಗಳನ್ನು ಬೆಳೆಗಾರರಿಗೆ ಒದಗಿಸಲಾಗುತ್ತಿದೆ.

ಆ) ಗುಣಮಟ್ಟದ ಹೂ ಬೇಸಾಯ ಮಾಡಲು ಹಸಿರುಮನೆ ನೆರಳು ಪರದೆ ವ್ಯವಸ್ಥೆ ಕಲ್ಪಿಸಲು ಸಹಾಯಧನ ಒದಗಿಸಲಾಗುತ್ತಿದೆ.

ಇ) ಜಿಲ್ಲಾ ಮಟ್ಟದಲ್ಲಿ ಫಲಪುಷ್ಪ ಪ್ರದರ್ಶನ ಏರ್ಪಡಿಸಿ ಆಧುನಿಕ ತಾಂತ್ರಿಕ ಮಾಹಿತಿ ಪರಿಚಯಿಸಲಾಗುತ್ತಿದೆ.

ಈ) ಪುಷ್ಪ ಕೃಷಿ ಬಗ್ಗೆ ರೈತರಿಗೆ ತಾಂತ್ರಿಕ ತರಬೇತಿ ನೀಡಲಾಗುತ್ತಿದೆ.

ಉ) ವಿವಿಧ ಹಣ್ಣಿನ ಕಸಿ: ಸಸಿಗಳನ್ನು ಇಲಾಖಾ ಕ್ಷೇತ್ರಗಳಲ್ಲಿ ಉತ್ಪಾದಿಸಿ ಬೆಳಗಾವಿ ಜಿಲ್ಲೆಯ ರೈತರಿಗೆ ವಿತರಿಸಲಾಗುತ್ತಿದೆ. ಹಾಗೂ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲಾಗುತ್ತಿದೆ.

ಊ) ಶಾಲಾ ಕಾಲೇಜು ಹಾಗೂ ಇತರೆ ಸಂಘ ಸಂಸ್ಥೆಗಳ ಆವರಣಗಳಲ್ಲಿ ಹಣ್ಣಿನ ಬೆಳೆಗಳ ನೆಡು ತೋಪುಗಳನ್ನು ಮಾಡಲಾಗುತ್ತಿದೆ.

ಋ) ದ್ರಾಕ್ಷಿ ಬೆಳೆಗಾರರಿಗೆ ಶೇಕಡ 50 ರಿಯಾಯಿತಿ ದರದಲ್ಲಿ ಪ್ಲಾಸ್ಟಿಕ್ ಕ್ರೇಟ್ಸ್ ಹಾಗೂ ಕರೋಗೇಟೆಡ್ ಕಾರ್ಡ್ ಬಾಕ್ಸ್ (ಒಣ ದ್ರಾಕ್ಷಿ ಶೇಖರಣೆಗಾಗಿ) ಗಳನ್ನು ವಿತರಿಸಲಾಗುತ್ತಿದೆ.

ಇ) ಹೌದು.

ಈ) ಹೂಬೆಳೆ

1. ಭಾರತ ಸರ್ಕಾರದ ಸಂಸ್ಥೆಯಾದ ಅಪಿಡಾ ವತಿಯಿಂದ ಶೇ. 50ರ ಸಹಾಯಧನ ಅಥವಾ ಗರಿಷ್ಠ 5 ಲಕ್ಷಗಳನ್ನು ಪ್ಯಾಕಿಂಗ್ ಹಾಗೂ ಕೊಯ್ಲೋತ್ತರ ಅನುಕೂಲತೆಗಳನ್ನು ಕಲ್ಪಿಸಲು ನೀಡಲಾಗುತ್ತಿದೆ. ಶೈತ್ಯಾಗಾರದ ವಾಹನ ಖರೀದಿಸಲು ಶೇ. 25ರ ಸಹಾಯಧನ ಅಥವಾ ಗರಿಷ್ಠ 5 ಲಕ್ಷಕ್ಕೆ ಮಿತಿಗೊಳಿಸಿ ಸಹಾಯಧನ ನೀಡಲಾಗುತ್ತಿದೆ.

2. ರಾಷ್ಟ್ರೀಯ ತೋಟಗಾರಿಕೆ ಮಂಡಳಿಯು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಶೇ. 4 ರ ಬಡ್ಡಿ ದರದಲ್ಲಿ ಗರಿಷ್ಠ 1 ಕೋಟಿ ರೂ.ಗಳ ವರೆಗೆ ಹಗುರ ಸಾಲದ ರೂಪದಲ್ಲಿ ನೀಡಲಾಗುತ್ತಿದೆ.

3. ನಬಾರ್ಡ್ ಸಂಸ್ಥೆಯು ಶೇ. 100 ರಷ್ಟು ರಫ್ತು ಆಧಾರಿತ ಉದ್ದಿಮೆಗಳಿಗೆ ಶೇ. 14ರ ಬಡ್ಡಿ ದರದಲ್ಲಿ 22 ಲಕ್ಷ ರೂ.ಗಳ ವರೆಗೆ ಸಾಲ ನೀಡುತ್ತಿದೆ.

4. ವಾಣಿಜ್ಯ ಹೂಗಳ ರಫ್ತಿಗಾಗಿ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಹೂಗಳನ್ನು ಸಂರಕ್ಷಿಸಿ ಇಡಲು ಶೈತ್ಯಾಗಾರವನ್ನು ನಿರ್ಮಿಸಲಾಗಿದೆ.

5. ವಿದೇಶದಿಂದ ಹೊಸತಳಿ ಬೀಜ ಹಾಗೂ ಗಿಡಗಳನ್ನು ಆಮದು ಮಾಡಿಕೊಳ್ಳುವ ವಿಧಾನವನ್ನು ಸರಳಗೊಳಿಸಲಾಗಿದೆ.

6. ಕರ್ನಾಟಕ ಸರ್ಕಾರವು ಪುಷ್ಪೋದ್ಯಮಕ್ಕೆ ಬೇಕಾದ ಜಮೀನನ್ನು ಖರೀದಿಸಲು ಕೃಷಿ ನೀತಿಯ ಭೂಕಾಯಿದೆಯಲ್ಲಿ ತಿದ್ದುಪಡಿ ಮಾಡಿ ನಿಯಮಗಳನ್ನು ಸರಳಗೊಳಿಸಿದೆ.

7. ಪುಷ್ಪೋದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ಪುಷ್ಪ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ಇಚ್ಛಿಸುವ ಬೆಳಿಗಾರರ ಸಂಘ, ಸಂಸ್ಥೆಗಳಿಗೆ, ಪುಷ್ಪ ಮಾರಾಟ ಮಳಿಗೆ ನಿರ್ಮಾಣ, ಸಾಗಣೆ ವಾಹನ ಖರೀದಿ, ಪ್ರೀಕೂಲಿಂಗ್ ಘಟಕ ಹಾಗೂ ಮಾರುಕಟ್ಟೆ ಗೋದಾಮುಗಳ ಮೂಲಭೂತ ಸೌಕರ್ಯಗಳಲ್ಲಿ ನಿರ್ಮಾಣಕ್ಕಾಗಿ ಇಲಾಖೆವತಿಯಿಂದ ಶೇ. 40 ರಷ್ಟು ಸಹಾಯಧನ ನೀಡಲಾಗುವುದು.

ಹಣ್ಣುಗಳು:

1. ರಫ್ತು ಗುಣಮಟ್ಟ ದ್ರಾಕ್ಷಿ ಉತ್ಪಾದನೆಯ ತಾಂತ್ರಿಕತೆ ಕುರಿತು ತರಬೇತಿಯನ್ನು ಅಥಣಿ ತಾಲ್ಲೂಕು ರೈತರಿಗೆ ತೋಟಗಾರಿಕೆ ಇಲಾಖೆ ಅಪೇಡಾ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

2. ಭಾರತ ಸರ್ಕಾರದ ಸಂಸ್ಥೆಯಾದ ಅಪೇಡಾ ಸಂಸ್ಥೆಯು ವಿಮಾನ ಸಾಗಾಣಿಕೆ ಸಹಾಯಧನ, ಪ್ಯಾಕೇಜಿಂಗ್ ಸಹಾಯಧನ ಮತ್ತು ಮಾರುಕಟ್ಟೆ ಅಭಿವೃದ್ಧಿಗೆ ಸಹಾಯವನ್ನು ನೀಡುತ್ತಿದೆ.

ರಫ್ತು (ಹೂ ಬೆಳೆಗಳು)

ಬೆಳಗಾಂ ಜಿಲ್ಲೆಯಿಂದ ವಾಣಿಜ್ಯ ಹೂವುಗಳ ರಫ್ತಾಗುತ್ತಿಲ್ಲ. ಆದರೆ ಹಸಿರುಮನೆಯಲ್ಲಿ ಉತ್ಪಾದಿಸಿದ ಜರ್ಬೆರಾ, ಕಾರ್ನೇಷನ್ ಕಟ್ ಫ್ಲವರ್ ಹೂಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಹಾಗೂ ನೆರೆ ರಾಜ್ಯಗಳಾದ ಗೋವ, ಮಹಾರಾಷ್ಟ್ರ, ದೆಹಲಿ ಇತ್ಯಾದಿ ಮಾರುಕಟ್ಟೆಗೆ ಕಳುಹಿಸಿ ಮಾರಾಟ ಮಾಡಲಾಗುತ್ತಿದೆ. ಇದರ ಅಂದಾಜು ಮೌಲ್ಯ ರೂ. 40 ಲಕ್ಷಗಳು.

ರಫ್ತು (ಹಣ್ಣು ಬೆಳೆಗಳು)

2000-01ನೇ ಸಾಲಿನಲ್ಲಿ ಅಥಣಿ ಪ್ರದೇಶದಲ್ಲಿ ಬೆಳೆದ ಸುಮಾರು 30 ಲಕ್ಷ ರೂ. ಮೌಲ್ಯದ ದ್ರಾಕ್ಷಿಯನ್ನು ರಫ್ತು ಮಾಡಲಾಗಿದೆ.

ರಾಜ್ಯದಲ್ಲಿ ಎ.ಪಿ.ಎಂ.ಸಿ. ಯಾರ್ಡ್‌ಗಳಲ್ಲಿ ರೈತ ಬಜಾರ್

1422 (1757) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) (ಸಾಸನೂರು): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಯಾವ ಯಾವ ಸ್ಥಳಗಳ ಎ.ಪಿ.ಎಂ.ಸಿ. ಯಾರ್ಡ್ ಗಳಲ್ಲಿ ರೈತ ಬಜಾರ್ ಪ್ರಾರಂಭ ಮಾಡಬೇಕೆಂದು ತೀರ್ಮಾನಿಸಲಾಗಿದೆ.

2. ರೈತ ಬಜಾರ್ ಪ್ರಾರಂಭ ಮಾಡುವುದರಿಂದ ರೈತರಿಗೆ ಆಗುವ ಲಾಭಗಳಾವುವು.

3. ಬೆಳಗಾವಿಯ ಎ.ಪಿ.ಎಂ.ಸಿ. ಯಾರ್ಡ್ ದಲ್ಲಿ ರೈತ ಬಜಾರ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು), (ಕೃಷಿ ಮಾರುಕಟ್ಟೆ ಸಚಿವರು):

1. ರಾಜ್ಯದಲ್ಲಿ ಪ್ರಾಯೋಗಿಕವಾಗಿ ರೈತರ ಸಂತೆಗಳನ್ನು ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಸ್ಥಾಪಿಸಲು ತೀರ್ಮಾನಿಸಲಾಗಿದೆ.

2. ರೈತರು ತಾವು ಬೆಳೆದ ಹಣ್ಣು ತರಕಾರಿಗಳನ್ನು ಮಧ್ಯವರ್ತಿಗಳ ಸಹಾಯವಿಲ್ಲದೆ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಾರೆ. ಮಾರಾಟ ಬೆಲೆಯನ್ನು ಮೊದಲೇ ನಿಗದಿಪಡಿಸುವುದರಿಂದ ರೈತರಿಗೆ ನ್ಯಾಯವಾದ ಬೆಲೆ ಹಾಗೂ ಗ್ರಾಹಕರಿಗೆ ಸಮಂಜಸವಾದ ಬೆಲೆಯಲ್ಲಿ ಹಣ್ಣು ಮತ್ತು ತರಕಾರಿ ದೊರೆಯಲು ಸಾಧ್ಯವಾಗುತ್ತದೆ. ರೈತರಿಗೆ ಮಾರಾಟ ಕುಶಲತೆ ವೃದ್ಧಿಯಾಗುತ್ತದೆ. ಗ್ರಾಹಕರ ಬೇಡಿಕೆಗೆ ಅನುಸಾರವಾಗಿ ರೈತರು ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತದೆ.

3. ಸದ್ಯಕ್ಕೆ ಇಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಬೆಳೆ ವಿಮೆ ಮಾಡಿದ ರೈತರಿಗೆ ವಿಮಾ ಹಣ ಪಾವತಿ

1423 (1758) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಳೆದ ವರ್ಷದ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ಬೆಳೆ ವಿಮೆಯನ್ನು ಮಾಡಲಾಗಿದೆ;

2) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ಮುಂಗಾರು ಹಾಗೂ ಹಿಂಗಾರು ಬೆಳೆಗಳಿಗೆ ಬೆಳೆ ವಿಮೆಯನ್ನು ಮಾಡಲಾಗಿದೆ;